ಶ್ರೀ ಡಿ. ಎ. ಚಿನ್ನಪ್ಪ.—ಎಲ್ಲದಕ್ಕೂ ಉತ್ತರ ತರಿಸಿಕೊಡುತ್ತೇನೆ ಎಂದೂ ಹೇಳಿದರೆ ಹೇಗೆ.

೧೦) ೧೯೮೮-೮೯ನೇ ಶೈಕ್ಷಣಿಕ ವರ್ಷದಲ್ಲಿ ಜಿಲ್ಲಾ ಪರಿಷತ್ ಖಾಸಗೀ ಹೈಸ್ಕೂಲುಗಳನ್ನು ಸ್ಥಾಪಿಸುವಲ್ಲಿ ಸರ್ಕಾರದಿಂದ ತಡೆ ಆಜ್ಞೆ ಬಂದಿರುವುದು

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾವಿಕಾಸಕ್ಕೆ ಹೆಸರಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈಸ್ಕೂಲು ಶಿಕ್ಷಣಕ್ಕೆ ಇನ್ನೂ ಸಾಕಷ್ಟು ಸೌಲಭ್ಯಗಳಿಲ್ಲದ ಪ್ರಯುಕ್ತ ಕೂಲಂಕುಷ ಪರಿಶೀಲನೆ ನಡೆಸಿ, ಕೆಲವು ಸರಕಾರಿ ಹೈಸ್ಕೂಲು ಹಾಗೂ ಕೆಲವು ಖಾಸಗಿ ಹೈಸ್ಕೂಲುಗಳನ್ನು ೧೯೮೮-೮೯ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಯೋಚಿಸಿದೆ ತನ್ನ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹೈಸ್ಕೂಲು ಪ್ರಾರಂಭಿಸಲು ಜಿಲ್ಲಾ ಪರಿಷತ್ತಿಗೆ ಅಧಿಕಾರವಿದ್ದರೂ, ಸರಕಾರದ ಪರವಾನಿಗೆ ಇಲ್ಲದೆ ಹೊಸ ಹೈಸ್ಕೂಲು ಪ್ರಾರಂಭಿಸಬಾರದೆಂದೂ ವಿದ್ಯಾ ಇಲಾಖೆಯ ಜಿಲ್ಲಾಧಿಕಾರಿಗಳಿಗೆ ಸರಕಾರ ನಿರ್ದೇಶನ ನೀಡಿರುವುದಾಗಿ ತಿಳಿದು ಬಂದಿದೆ. ಹೀಗಾದಲ್ಲಿ ಅನೇಕ ಕಡೆ ಹೈಸ್ಕೂಲುಗಳು ಇಲ್ಲದೆ, ದೂರದ ಮಕ್ಕಳಿಗೆ, ಹಣವ್ಯಯ ಮಾಡಿ ಕಲಿಯಲಾಗದ ಹರಿಜನ ಗಿರಿಜನ ದುರ್ಬಲವರ್ಗದ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗುತ್ತದೆ. ಹೊಸ ಹೈಸ್ಕೂಲು ಸ್ಥಾಪನೆಗೆ ಅಡ್ಡಿ ಮಾಡಬಾರದೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನಾರಾಯಣ.—ಮಾನ್ಯ ಅಧ್ಯಕ್ಷರೇ, ಉತ್ತರ ತರಿಸಿಕೊಡುತ್ತೇನೆ.

೧೧) ಬಳ್ಳಾರಿಯ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಪಿ.ಡಬ್ಲ್ಯು.ಡಿ. ಇವರ ಮೇಲೆ ಲಂಚದ ಆರೋಪ

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಪಿ.ಡಬ್ಲ್ಯೂ.ಡಿ.ಯ ಅಸಿಸ್ಟೆಂಟ್...

ಅಧ್ಯಕ್ಷರು.—ನಿಮ್ಮ ಪರವಾಗಿ ನಾನೇ ಓದುತ್ತೇನೆ.

ಶ್ರೀ ಎಂ. ರಾಮಪ್ಪ.—ಆಗಬಹುದು.

ಅಧ್ಯಕ್ಷರು.—''ಪಿ.ಡಬ್ಲ್ಯು.ಡಿ.ಯ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ನಂ. ೧ ಸಬ್ ಡಿವಿಜನ್ ಬಳ್ಳಾರಿ ಇವರ ಕೆಲಸಕಾರ್ಯದ ಮೇಲೆ ಸಾರ್ವಜನಿಕರಿಂದಲೇ ಆದಷ್ಟು ಇಲಾಖಾ ಮೇಲಾಧಿಕಾರಿಗಳಿಂದಲೂ ಸಹ ಅಪಾದನೆ ಇದ್ದು, ಸದ್ರಿಯವರ ಅವ್ಯವಹಾರದ ಬಗ್ಗೆ ಲೋಕಾಯುಕ್ತದವರೆಗೂ ದೂರು ಹೋದಬಗ್ಗೆ ತಿಳಿದುಬಂದಿದ್ದು ಈ ಅಧಿಕಾರಿಯನ್ನು ಅಲ್ಲಿಯೇ ಮುಂದುವರೆಯಲು ಬಿಟ್ಟಲ್ಲಿ, ಕಾಗದ ಪತ್ರಗಳನ್ನು ತಿದ್ದುವ ಸಾಧ್ಯತೆ ಇದೆ. ಇಂಥ ಅಧಿಕಾರಿ ಇರುವುದರಿಂದ ಅಲ್ಲಿ ಯಾವ ಒಳ್ಳೆ ಕೆಲಸಕಾರ್ಯಗಳು ಆಗುವ ಸಾಧ್ಯತೆ ಇಲ್ಲದ ಕಾರಣ ಆತನನ್ನು ತಕ್ಷಣ ಅಲ್ಲಿಂದ ಬದಲಿಸುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.''

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಶ್ರೀ ದತ್ತಾತ್ರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ. ೧, ಉಪ ವಿಭಾಗ, ಲೋಕೋಪಯೋಗಿ ಇಲಾಖೆ, ಬಳ್ಳಾರಿ, ಇವರ ಮೇಲೆ ಭ್ರಷ್ಟಾಚಾರ, ಕೆಲಸಗಳಲ್ಲಿ ದುರ್ವ್ಯವಹಾರ ಮತ್ತು ಬಲ್ಲ ಮೂಲಗಳಿಂದ ಹೆಚ್ಚು ಆಸ್ತಿ ಸಂಪಾದಿಸಿರುವ ಬಗ್ಗೆ ಮತ್ತು ಕೆಲವು ಅಪಾದನೆಗಳ ಬಗ್ಗೆ ಹಲವಾರು ದೂರುಗಳು ಬಂದಿದ್ದು, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ) ಧಾರವಾಡ, ಇವರ ವಿಚಾರಣೆಯ ಮೇರೆಗೆ ಇವರ ಮೇಲಿನ ಆರೋಪಗಳ ಬಗ್ಗೆ ವಿವರವಾದ ತನಿಖೆ ನಡೆಸಿ ಸರ್ಕಾರಕ್ಕೆ ಕೂಡಲೇ ವರದಿ ಒಳಪಡಿಸಿ ಕೊಡಲು ಲೋಕಾಯುಕ್ತರವರ ಕಛೇರಿಗೆ ದಿನಾಂಕ ೨೫-೫-೧೯೮೮ ರಂದು ಕಳುಹಿಸಿಕೊಡಲಾಗಿದೆ. ಈ ಅಧಿಕಾರಿಯನ್ನು ಅಲ್ಲಿಂದ ಬದಲಿಸುವ ಬಗ್ಗೆ ಸರ್ಕಾರವು ಪರಿಶೀಲಿಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದು.